## ದಿನಾಂಕ 20-02-2021 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್-88 ರ ಈಸ್ಟ್ ಕಲ್ಚರಲ್ ಅಸೋಸಿಯೇಶನ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಈಸ್ಟ್ ಕಲ್ಚರಲ್ ಅಸೋಸಿಯೇಶನ್ ಇಲ್ಲಿ ದಿನಾಂಕ : 20.02.2021 ರಂದು ಬೆಳಿಗ್ಗೆ 10.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಡಾ॥ನಾಗರಾಜು.ಎಸ್ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀ.ಸಿ.ಲಿಂಗರಾಜೇಗೌಡ– ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಜಗದೀಶ್ – ಎಇಇ, ಬಿಡಬ್ಲ್ಯೂಎಸ್‌ಎಸ್‌ಬಿ
4. ಶ್ರೀ.ನಾಗರಾಜ್ – ಎಇಇ, ಬಿಡಬ್ಲ್ಯೂಎಸ್‌ಎಸ್‌ಬಿ
5. ಶ್ರೀ.ಮಂಜುನಾಥ್ – ಎಇಇ, ಬೆಸ್ಕಾಂ,
6. ಶ್ರೀ.ಶಂಕರಪ್ಪ – ಎಇಇ, ಎಲೆಕ್ಟ್ರಿಕಲ್, ಬಿಬಿಎಂಪಿ
7. ಶ್ರೀಮತಿ ಮಮತಾ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
8. ಶ್ರೀ.ಲೋಹಿತ್ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
9. ಶ್ರೀ.ಶ್ರೀನಿವಾಸ್ – ಎಇಇ, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
10. ಶ್ರೀ.ಸಂತೋಷ್ – ಎಇ, ವಾ.ವೇ.ಮ್ಯಾನೇಜ್‌ಮೆಂಟ್(BWSSB)
11. ಶ್ರೀ.ಕೇಶವ ಹೆಗಡೆ – ಎಇಇ, ಯುಎಫ್‌ಡಬ್ಲ್ಯೂ (BWSSB)
12. ಶ್ರೀ.ಶಿವೇಗೌಡ – ಆರೋಗ್ಯ ವೈದ್ಯಾಧಿಕಾರಿಗಳು (ಸಿವಿಆರ್)
13. ಶ್ರೀ.ಅನಿಲ್ – ಎಸ್‌ಐ, ಲಾ ಅಂಡ್ ಆರ್ಡರ್
14. ಶ್ರೀ.ರಾಜಣ್ಣ – ಎಸ್‌ಐ ಸಂಚಾರಿ ವಿಭಾಗ
15. ಶ್ರೀ.ಶ್ರೀನಿವಾಸ್ – ಹಿ.ಆ.ಪ
16. ಶ್ರೀ.ಮೂರ್ತಿ – ಸ.ಕಂ.ಅ (ಜೆಬಿಎನ್)
17. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
18. ಶ್ರೀಮತಿ.ಪ್ರಭಾ – ಸ.ಅ, ಬೆಸ್ಕಾಂ
19. ಶ್ರೀ,.ಗೋವಿಂದೇ ಗೌಡ – ತೋಟಗಾರಿಕಾ ಇಲಾಖೆ
20. ಶ್ರೀ.ದೇವರಾಜ್ – ಅರಣ್ಯ ಇಲಾಖೆ (ಸೂಪರ್‌ವೈಸರ್)
21. ಶ್ರೀ.ತಿಮ್ಮಪ್ಪ – ಅರಣ್ಯ ಇಲಾಖೆ
22. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
23. ಶ್ರೀ.ಚಂದ್ರ – ಸದಸ್ಯರು
24. ಶ್ರೀ.ಜ್ಯೋತಿರಾಮಲಿಂಗಂ – ಸದಸ್ಯರು
25. ಶ್ರೀ.ಮಧು – ಸದಸ್ಯರು
26. ಶ್ರೀ.ಸದಾಶಿವನ್ – ಸದಸ್ಯರು
27. ಶ್ರೀ.ಶ್ರೀನಿವಾಸ್ – ಸದಸ್ಯರು
28. ಶ್ರೀ.ಜಗನ್ನಾಥ್ – ಸದಸ್ಯರು



Scanned by CamScanner

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಲಿ.ಲಿಂಗರಾಜೇಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

**ಘನತ್ಯಾಜ್ಯ ನಿರ್ವಹಣೆ :**

- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಉಂಟಾಗುವ ಬ್ಲಾಕ್ ಸ್ಪಾಟ್‌ಗಳನ್ನು ಹಾಗೂ ಶೇಖರಣೆಯಾಗುವ ಡೆಬ್ರಿಸ್‌ಗಳನ್ನು ಆಗಿಂದ್ದಾಗ್ಗೆ ತೆರವುಗೊಳಿಸಿ ಸುಂದರವಾಗಿಟ್ಟುಕೊಳ್ಳಲು ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಸೂಚಿಸಿದರು.

**ಕಾಮಗಾರಿ ಇಲಾಖೆ :-**

- 12ನೇ ಮುಖ್ಯರಸ್ತೆಯಿಂದ 14ನೇ ಮುಖ್ಯರಸ್ತೆ, ಹೆಚ್.ಎ.ಎಲ್ 2ನೇ ಹಂತ, ಇಲ್ಲಿ ಮರದ ರೆಂಬೆ ಕಟಾವು, ಫುಟ್‌ಪಾತ್‌ನಲ್ಲಿ ಒಡೆದಿರುವ ಸ್ಲಾಬ್‌ಗಳನ್ನು ಅಳವಡಿಸಲು ಹಾಗೂ ರಸ್ತೆಗಳಲ್ಲಿ ತೂಗಾಡುತ್ತಿರುವ ಕೇಬಲ್‌ಗಳನ್ನು ಸರಿಪಡಿಸಲು ಹಾಗೂ ಗ್ರಾಫೈಟ್ ಅಪಾರ್ಟ್‌ಮೆಂಟ್ ಹಿಂಬದಿಯ ಖಾಲಿ ಜಾಗವನ್ನು ಸ್ವಚ್ಛಗೊಳಿಸಿ ಸದರಿ ಸ್ಥಳದಲ್ಲಿ ಯೋಗ ಪ್ಲಾಟ್‌ಫಾರ್ಮ್ ನಿರ್ಮಿಸಲು ಮತ್ತು 12ನೇ ಎ ಮುಖ್ಯರಸ್ತೆಯ ಎನ್‌ಪಿಎಸ್ ಸ್ಕೂಲ್ ಪಕ್ಕ ಸೀನಿಯರ್ ಸಿಟಿಜನ್ ಪಾರ್ಕ್ ನಿರ್ಮಿಸಲು, ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿ, ಬೆಸ್ಕಾಂರವರೊಂದಿಗೆ ಸಮನ್ವಯ ಸಾಧಿಸಿಕೊಂಡು 12ನೇ ಎ ಮತ್ತು 12ನೇ ಬಿ ಮುಖ್ಯರಸ್ತೆಗಳಿಗೆ ಡಾಂಬರೀಕರಣ ಕೈಗೊಳ್ಳುವಂತೆ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘರವರು ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರರಿಗೆ ಸೂಚಿಸಿದರು.
- 18ನೇ ಎ,ಬಿ,ಸಿ,ಡಿ ಮತ್ತು 1ನೇ ಸಿ ಕ್ರಾಸ್‌ನಲ್ಲಿ ಚರಂಡಿಗಳ ಹೂಳು ತೆಗೆಯಲು ಸದಸ್ಯರಾದ ಶ್ರೀ.ಸದಾಶಿವರವರು ಮತ್ತೊಮ್ಮೆ ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರರಿಗೆ ಸೂಚಿಸಿದರು.
- 13ನೇ ಮುಖ್ಯರಸ್ತೆಯಲ್ಲಿ ನವನಗರೋತ್ಥಾನ ಅನುದಾನದ ಕಾಮಗಾರಿಯು ನಡೆಯುತ್ತಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಮಾನ್ಯ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಮತ್ತೊಮ್ಮೆ ತಿಳಿಸಿದರು.
- ವಾರ್ಡಿನ ಹಲವಾರು ಕಡೆಗಳಲ್ಲಿ ಬೆಸ್ಕಾಂ ವತಿಯಿಂದ ಯುಜಿ ಕೇಬಲ್ ಅಳವಡಿಸಿದ್ದು, ಹಲವಾರು ಕಡೆಗಳಲ್ಲಿ ಕೇಬಲ್‌ಗಳನ್ನು ರಸ್ತೆಯ ಮೇಲೆ ಸಾರ್ವಜನಿಕರಿಗೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗುವಂತೆ ಹಾಗೆ ಬಿಟ್ಟಿದ್ದು, ಇದನ್ನು ತೆರವುಗೊಳಿಸುವಂತೆ ಮಾನ್ಯ ಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.
- ಕೋಡಿಹಳ್ಳಿ ವೃತ್ತದ ಬಳಿ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚಾಗಿದ್ದು, ಸಿಸಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿಕೊಂಡು ಕ್ರಮ ಕೈಗೊಳ್ಳುವುದಾಗಿ ಅಭಿಯಂತರರು ತಿಳಿಸಿದರು.
- ಕೋಡಿಹಳ್ಳಿ ಸ್ಮಶಾನದ ಹತ್ತಿರ ಮತ್ತು ಒಳಗಡೆ ಸ್ವಚ್ಛಗೊಳಿಸಿ ಸಿಸಿಕ್ಯಾಮೆರಾ ಅಳವಡಿಸಲು ಅಧ್ಯಕ್ಷರು ಸೂಚಿಸಿದರು.



Scanned by CamScanner

- ಬಿಎಸ್‌ಎನ್‌ಎಲ್ ಜಂಕ್ಷನ್‌ನಿಂದ ಲೀಲಾ ಪ್ಯಾಲೇಸ್ ರಸ್ತೆಯವರೆಗೆ ರಸ್ತೆಯು ಪೂರ್ತಾ ಹದಗೆಟ್ಟಿದ್ದು, ಸರಿಪಡಿಸಲು ಹೆಚ್.ಎ.ಎಲ್ 2ನೇ ಹಂತದ ಅಸೋಸಿಯೇಶನ್‌ರವರು ಕೋರಿದರು. ಸದರಿ ರಸ್ತೆಯು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗರವರಿಗೆ ಸಂಬಂಧಪಟ್ಟಿದ್ದು, ಕ್ರಮ ಕೈಗೊಳ್ಳುವಂತೆ ಸದರಿಯವರಿಗೆ ಸೂಚಿಸಲಾಯಿತು.
- ಜೀವನ್‌ಭೀಮಾನಗರ ಮುಖ್ಯರಸ್ತೆಯಲ್ಲಿ ಕೆಲವು ಕಡೆಗಳಲ್ಲಿ ಫುಟ್‌ಪಾತ್ ಸ್ಲಾಬ್‌ಗಳು ಒಡೆದಿರುತ್ತದೆ. ಹಾಗೂ ಫುಟ್‌ಪಾತ್ ಕಾಬೂಲ್ ಸ್ಟೋನ್‌ಗಳು ಚದುರಿದ್ದು, ಇದರಿಂದ ಪಾದಾರಿಗಳಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗರವರಿಗೆ ಸೂಚಿಸಲಾಯಿತು
- ವಾರ್ಡಿನ ಹಲವು ರಸ್ತೆ ಬದಿಗಳಲ್ಲಿ ಮತ್ತು ಫುಟ್‌ಪಾತ್ ಅನ್ನು ಅತಿಕ್ರಮಿಸಿ ಅನಧಿಕೃತವಾಗಿ ವ್ಯಾಪಾರಗಳನ್ನು ನಡೆಸುತ್ತಿದ್ದು, ಇದನ್ನು ತೆರವುಗೊಳಿಸುವಂತೆ ಹೆಚ್.ಎ.ಎಲ್ 2ನೇ ಹಂತದ ಅಸೋಸಿಯೇಶನ್‌ರವರು ಕೋರಿದರು. ಈ ಬಗ್ಗೆ ಕ್ರಮವಹಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ಬಿಎಸ್‌ಎನ್‌ಎಲ್ ಜಂಕ್ಷನ್‌ನಲ್ಲಿ ರಸ್ತೆಯು ತೀರಾ ಹದಗೆಟ್ಟಿದ್ದು, ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಹೇಳಿದರು.
- ಓಂ ಶಕ್ತಿ ದೇವಸ್ಥಾನ ರಸ್ತೆ, ಪಿಡಬ್ಲ್ಯೂಡಿ ಕ್ವಾಟ್ರಸ್ ರಸ್ತೆ, ಕುಳ್ಳಪ್ಪ ಕಾಲೊನಿ, 3ನೇ ಕ್ರಾಸ್ ಶಿವಲಿಂಗಯ್ಯ ಕಾಲೊನಿಗಳಲ್ಲಿ, ಸ್ಯಾನಿಟರಿ, ವಾಟರ್ ಲೈನ್, ಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಕೆಲಸ ಕೈಗೊಳ್ಳಲು ಶ್ರೀ.ಪ್ರಮೋದ್ ರೆಡ್ಡಿ, ಸಾರ್ವಜನಿಕರು ಕೋರಿದರು. ಇದಕ್ಕೆ ಪರಿಶೀಲಿಸಲಾಗುವುದು ಎಂದು ತಿಳಿಸಲಾಯಿತು.

ನೀರು ಮತ್ತು ಒಳಚರಂಡಿ :-

- ಕೋಡಿಹಳ್ಳಿ ಗ್ರಾಮಸ್ಥರು, ಕೋಡಿಹಳ್ಳಿ ಪ್ರದೇಶಗಳಲ್ಲಿ ಹೊಸದಾಗಿ, ಒಳಚರಂಡಿ, ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಮಾಡಲು ಕೋರಿದರು. ಈ ಬಗ್ಗೆ ಮುಂದಿನ ದಿನಗಳಲ್ಲಿ ಸ್ಥಳ ಪರಿಶೀಲನೆ ನಡೆಸಲಾಗುವುದು ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.
- ಹೆಚ್.ಎ.ಎಲ್ 2ನೇ ಹಂತದ 3ನೇ ಕ್ರಾಸ್ ಮತ್ತು 4ನೇ ಕ್ರಾಸ್‌ನಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಪೈಪ್ ಹೊಸದಾಗಿ ಅಳವಡಿಸುವಂತೆ ಕೋರಿದರು. ಈ ಬಗ್ಗೆ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಯ ಗಮನಕ್ಕೆ ತರಲಾಯಿತು.
- 10 ನೇ ಕ್ರಾಸ್, ಕೋಡಿಹಳ್ಳಿಯಲ್ಲಿ ಸ್ಯಾನಿಟರಿ ಪೈಪ್‌ಗಳನ್ನು ಬದಲಾಯಿಸಿಕೊಡುವಂತೆ ನಿವಾಸಿಯಾದ ಶ್ರೀ.ಕೃಷ್ಣಮೂರ್ತಿರವರು ಕೋರಿದರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿರವರಾದ ಶ್ರೀಮತಿ.ಮಮತಾರವರು ಒಪ್ಪಿಕೊಂಡಿರುತ್ತಾರೆ. ಹಾಗೂ ಸದರಿ ಕಾಮಗಾರಿ ಮುಗಿದ ನಂತರದಲ್ಲಿ ರಸ್ತೆಗೆ ಕಾಂಕ್ರೀಟ್ ಹಾಕಿಕೊಡಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.
- ಕೋಡಿಹಳ್ಳಿ 2ನೇ ಕ್ರಾಸ್‌ನ ನಿವಾಸಿಗಳು ಮಾತನಾಡಿ 1 ವರ್ಷಗಳಿಂದ ಸುಮಾರು 10 ಮನೆಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಮಾಡಲಾಗುತ್ತಿರುವುದಿಲ್ಲ ಎಂದು ಮತ್ತೊಮ್ಮೆ ದೂರಿರುತ್ತಾರೆ. ಈ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ತಿಳಿಸಿದರು.



Scanned by CamScanner

- ಹೆಚ್.ಎ.ಎಲ್ 3ನೇ ಹಂತದ, 11, 12 ಮತ್ತು 13ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಾಗಿ ಶ್ರೀ.ಚಂದ್ರ, ಸದಸ್ಯರು ಹಿಂದಿನ ಸಭೆಯಲ್ಲಿ ತಿಳಿಸಿದ ವಿಷಯದ ಬಗ್ಗೆ ಮತ್ತೊಮ್ಮೆ ತಿಳಿಸಲಾಗಿ, ಈ ಬಗ್ಗೆ ಸಂಬಂಧಪಟ್ಟ ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆಯ ಅಭಿಯಂತರರು ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ತಿಳಿಸಿದರು.
- ಹೆಚ್.ಎ.ಎಲ್ 2ನೇ ಹಂತದ, 18ನೇ ಎ ಮುಖ್ಯರಸ್ತೆ, 3ನೇ, 4ನೇ ಮತ್ತು 5ನೇ ಅಡ್ಡರಸ್ತೆಗಳಲ್ಲಿ ಹೊಸದಾಗಿ ಒಳಚರಂಡಿ ಪೈಪ್ ಅಳವಡಿಸಲು ಸದಸ್ಯರಾದ ಶ್ರೀ.ವಿಜಯ್‌ರವರು ಮತ್ತೊಮ್ಮೆ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮವಹಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದರು.
- ಕೋಡಿಹಳ್ಳಿ ಮುಖ್ಯರಸ್ತೆಯಲ್ಲಿರುವ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲವೆಂದು ಕೋಡಿಹಳ್ಳಿ ನಿವಾಸಿಗಳು ದೂರಿದರು ಇದಕ್ಕೆ ಅಧ್ಯಕ್ಷರು ಒಳಚರಂಡಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಮಾಡಲು ಅಥವಾ ಒಳಚರಂಡಿ ಪೈಪುಗಳನ್ನು ಬದಲಾಯಿಸಲು ಸೂಚಿಸಿದರು.

**ಬೀದಿ ದೀಪ ನಿರ್ವಹಣೆ :**

- ವಾರ್ಡಿನ ಹಲವಾರು ರಸ್ತೆಗಳ ಬೀದಿದೀಪಗಳಿಗೆ ಟೈಮರ್‌ಗಳು ಇಲ್ಲದ ಕಾರಣ ಸದರಿ ಬೀದಿದೀಪಗಳಿಗೆ ಟೈಮರ್ ಅಳವಡಿಸಲು ಕೋರಿದರು.
- ವಾರ್ಡಿನಲ್ಲಿ ಇರುವ ಬೀದಿದೀಪಗಳ ಬಗ್ಗೆ ಜಂಟಿಯಾಗಿ ಪರಿಶೀಲನೆ ನಡೆಸುವ ಕೆಲಸವು ಪ್ರಗತಿಯಲ್ಲಿರುವುದಾಗಿ ಕಂದಾಯ ಪರಿವೀಕ್ಷಕರು ತಿಳಿಸಲಾಗಿ, ಮುಂದಿನ ಸಭೆಯ ಒಳಗಾಗಿ ಪೂರ್ಣಗೊಳಿಸುವಂತೆ ಹಾಗೂ ಹೊಸದಾಗಿ ಅಗತ್ಯವಿರುವ ಕಡೆ ಬೀದಿ ದೀಪಗಳನ್ನು ಅಳವಡಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.
- 17ನೇ ಮುಖ್ಯರಸ್ತೆ, ಹೆಚ್.ಎ.ಎಲ್ 2ನೇ ಹಂತದಲ್ಲಿ ಹೈ ಮಾಸ್ಕ್ ಲೈಟ್ ಅಳವಡಿಸುವಂತೆ ನಿವಾಸಿಗಳು ಕೋರಿದರು.
- ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಹಲವು ಕಡೆಗಳಲ್ಲಿ ಬೀದಿ ದೀಪಗಳು ಸಮರ್ಪಕವಾಗಿ ಇಲ್ಲದಿರುವ ಬಗ್ಗೆ ದೂರಿದರು. ಈ ಬಗ್ಗೆ ಪರಿಶೀಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಬೆಸ್ಕಾಂ :**

- ಆನಂದಪುರದಲ್ಲಿ ಹಲವು ಕಡೆಗಳಲ್ಲಿ ಬೀದಿ ದೀಪಗಳ ಸುಮಾರು 30 ಕಂಬಗಳು ತುಂಬಾ ಹಳೆಯದಾಗಿದ್ದು, ಸದರಿ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿ, ಕಂಬಗಳನ್ನು ಬದಲಾಯಿಸುವ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ತಿಳಿಸುತ್ತಾ, ಸದರಿ ಸ್ಥಳಗಳಲ್ಲಿನ ರಸ್ತೆಗಳು ತುಂಬಾ ಕಿರಿದಾಗಿದ್ದು, ದೊಡ್ಡ ವಾಹನ(ಕ್ರೇನ್) ಹೋಗದ ಕಾರಣ ಕಾಲಾವಕಾಶದ ಅಗತ್ಯವಿರುತ್ತದೆ ಎಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಹಲವಾರು ರಸ್ತೆಗಳಲ್ಲಿ ರಸ್ತೆ ಅಗೆತ ಮಾಡಿ ಕೇಬಲ್‌ಗಳನ್ನು ರಸ್ತೆಯಲ್ಲಿಯೇ ಬಿಟ್ಟಿರುವ ಬಗ್ಗೆ ಹಿಂದಿನ ಸಭೆಯಲ್ಲಿಯೇ ತಿಳಿಸಲಾಗಿದ್ದು, ಇದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅಪಘಾತ



Scanned by CamScanner

ಉಂಟಾಗುವ ಸಾಧ್ಯತೆ ಇರುವ ಬಗ್ಗೆ ಶ್ರೀ.ರಾಮಕೃಷ್ಣರವರು ದೂರಿದ್ದ ವಿಷಯವನ್ನು ಪುನಃ ಚರ್ಚಿಸಲಾಯಿತು.

**ಪೊಲೀಸ್ ಇಲಾಖೆ :**

- ಹಿಂದಿನ ಸಭೆಯಲ್ಲಿ ಅಧ್ಯಕ್ಷರು ಜೀವನ್‌ಭೀಮಾನಗರ ಮುಖ್ಯರಸ್ತೆ, ಜೀವನ್‌ಭೀಮಾನಗರ ಬಸ್‌ಸ್ಟ್ಯಾಂಡ್ ರಸ್ತೆ, 80 ಅಡಿ ರಸ್ತೆ ಇಸ್ರೋ ಜಂಕ್ಷನ್ ಮತ್ತು ದೊಮ್ಮಲೂರು ಫ್ಲೈ ಓವರ್ ಕೆಳಭಾಗದಲ್ಲಿ ಪಾದಚಾರಿ ಮಾರ್ಗಗಳ ಮೇಲೆ ನಿಲ್ಲಿಸಿರುವ ಹಳೆಯ ವಾಹನಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಸಂಚಾರಿ ಪೊಲೀಸ್‌ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು ಈಗಾಗಲೇ ಪೊಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.
- ದೊಮ್ಮಲೂರು ಫ್ಲೈಓವರ್ ಹತ್ತಿರ, ಅಂಬೇಡ್ಕರ್ ಸ್ಕೂಲ್ ಹತ್ತಿರ, ಕೋಡಿಹಳ್ಳಿ ಯಲ್ಲಪ್ಪ ಬೇಕರಿ ಬಳಿ ಮತ್ತು ಶನಿಮಹಾತ್ಮ ದೇವಸ್ಥಾನದ ಹತ್ತಿರ, ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ಈ ಬಗ್ಗೆ ಕ್ರಮವಹಿಸುವಂತೆ ಕೋರಿದರು. ಇದಕ್ಕೆ ಪೊಲೀಸ್ ಇಲಾಖೆಯವರು ಒಪ್ಪಿರುತ್ತಾರೆ.

**ಆರೋಗ್ಯ ಇಲಾಖೆ :**

- ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಪಾರ್ಕ್‌ಗಳಲ್ಲಿ ಫಾಗಿಂಗ್ (ಸೊಳ್ಳೆ ನಿಯಂತ್ರಣ ಔಷದ ಸಿಂಪಡಿಸುವಿಕೆ) ಮಾಡಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದರೂ ಸಮರ್ಪಕವಾಗಿ ಕ್ರಮ ಕೈಗೊಳ್ಳದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಬಿಲ್ ತಡೆಹಿಡಿಯುವಂತೆ ತಿಳಿಸಿದರು. ಹಾಗೂ ಮುಂದೆ ಈ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಸಭೆಗೆ ಹಾಜರಾಗಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- ವಾರ್ಡ್‌ನಲ್ಲಿರುವ PG ಗಳನ್ನು ಸರ್ವೆಮಾಡಿ ಅವರಿಗೆ ನೋಟಿಸ್ ನೀಡಲು ಸೂಚಿಸಿದರು.

**ಅರಣ್ಯ ಇಲಾಖೆ :**

- ಸಮಿತಿಯ ಸದಸ್ಯರಾದ ಶ್ರೀ.ಸದಾಶಿವನ್‌ರವರು, 18ನೇ ಎ,ಬಿ,ಸಿ ಮತ್ತು ಡಿ ಮುಖ್ಯರಸ್ತೆ ಮತ್ತು 1ನೇ, 1ನೇ ಎ ಅಡ್ಡರಸ್ತೆಯಲ್ಲಿ ಹಾಗೂ ಶ್ರೀಮತಿ.ಕವಿತಾರವರು 13ನೇ ಮುಖ್ಯರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿರುವ ಮರಗಳ ರೆಂಬೆಗಳನ್ನು ಕತ್ತರಿಸಿ ತೆರವುಗೊಳಿಸಿಕೊಡಲು ಕೋರಿದ್ದ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ, ಈ ಬಗ್ಗೆ ಪತ್ರಮುಖೇನ ಕೋರಬೇಕಾಗಿರುತ್ತದೆ ಎಂದು ಹಿಂದಿನ ಸಭೆಯಲ್ಲಿ ತಿಳಿಸಿದ್ದ ಮೇರೆಗೆ ಕಛೇರಿಯಿಂದ ಪತ್ರವನ್ನು ಬರೆಯುವಂತೆ ಅಭಿಯಂತರಿಗೆ ಸೂಚಿಸಿದರು.

**ಮಳೆನೀರುಗಾಲುವೆ :**

- ಮಳೆಗಾಲದ ಸಂದರ್ಭದಲ್ಲಿ 18ನೇ ಎ, ಬಿ, ಸಿ ಮತ್ತು ಡಿ ಮುಖ್ಯರಸ್ತೆ ಮತ್ತು 1ನೇ, 1 'ಎ', 1 'ಬಿ', ಅಡ್ಡರಸ್ತೆಗಳಲ್ಲಿ ಮಳೆನೀರುಗಾಲುವೆಯ ನೀರು ಹಿಮ್ಮುಖವಾಗಿ ನಿಂತು ನಿವಾಸಿಗಳ ಮನೆಗಳಿಗೂ ಸಹ ನೀರು ನುಗ್ಗಿ ಅನಾಹುತ ಉಂಟಾಗುತ್ತಿರುತ್ತದೆ ಎಂದು ಶ್ರೀ.ಸದಾಶಿವನ್, ಸದಸ್ಯರು ಮಾತನಾಡಿದರು. ಈ ಬಗ್ಗೆ ಅನುದಾನದ ಲಭ್ಯತೆಯ ಪರಿಶೀಲನೆ ಮಾಡಿ ಒಂದು ಮೋಟಾರ್ ಪಂಪ್ ವ್ಯವಸ್ಥೆಯನ್ನು 2–3 ತಿಂಗಳುಗಳಲ್ಲಿ ಮಾಡುವುದಾಗಿ ಮಳೆನೀರುಗಾಲುವೆ ವಿಭಾಗದ ಸಹಾಯಕ ಅಭಿಯಂತರರು ತಿಳಿಸಿದರು.



Scanned by CamScanner

**ಆಯವ್ಯಯಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳು**

1. ಕೋಡಿಹಳ್ಳಿಯಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಅಂದಾಜು ಮೊತ್ತ ರೂ.500.00 ಲಕ್ಷಗಳು
2. ಕೋಡಿಹಳ್ಳಿಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಕಾಮಗಾರಿ ಅಂದಾಜು ಮೊತ್ತ ರೂ.100.00 ಲಕ್ಷಗಳು
3. ವಾರ್ಡಿನ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಕಾಮಗಾರಿ ಅಂದಾಜು ಮೊತ್ತ ರೂ.50.00 ಲಕ್ಷಗಳು
4. ವಾರ್ಡಿನ ಎಲ್ಲಾ ಪಾರ್ಕ್‌ಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕಾಮಗಾರಿಗಳು ಅಂದಾಜು ಮೊತ್ತ ರೂ.100.00 ಲಕ್ಷಗಳು
5. ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಕಾಮಗಾರಿ ಅಂದಾಜು ಮೊತ್ತ ರೂ. 20.00 ಲಕ್ಷಗಳು
6. ವಾರ್ಡಿನ ವಿವಿಧ ಕಡೆಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ ಕಾಮಗಾರಿ ಅಂದಾಜು ಮೊತ್ತ ರೂ.50.00 ಲಕ್ಷಗಳು
7. ವಾರ್ಡಿನ ಹಲವು ಕಡೆಗಳಲ್ಲಿ ಮಳೆನೀರು ಕೋಯ್ಲು ಅಳವಡಿಕೆ ಕಾಮಗಾರಿ ಅಂದಾಜು ಮೊತ್ತ ರೂ. 20.00 ಲಕ್ಷಗಳು
8. ಹೆಚ್.ಎ.ಎಲ್ 2ನೇ ಹಂತದ ಅಭಿವೃದ್ಧಿ ಕಾಮಗಾರಿಗಳು ಅಂದಾಜು ಮೊತ್ತ ರೂ.300.00 ಲಕ್ಷಗಳು
9. ಹೆಚ್.ಎ.ಎಲ್ 3ನೇ ಹಂತದ ಅಭಿವೃದ್ಧಿ ಕಾಮಗಾರಿಗಳು ಅಂದಾಜು ಮೊತ್ತ ರೂ.300.00 ಲಕ್ಷಗಳು
10. ಜೀವನ್‌ಭೀಮಾನಗರದ ಪಿಡಬ್ಲ್ಯೂಡಿ ಕ್ವಾಟ್ರಸ್ ಮತ್ತು ಎಲ್‌ಐಡಿ ಕ್ವಾಟ್ರಸ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಅಂದಾಜು ಮೊತ್ತ ರೂ.300.00 ಲಕ್ಷಗಳು
11. ಮಳೆನೀರುಗಾಲುವೆಯ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗಾಗಿ ಅಂದಾಜು ಮೊತ್ತ ರೂ.500.00 ಲಕ್ಷಗಳು.

ಮೇಲ್ಕಂಡಂತೆ ಒಟ್ಟು 2240.00 ಲಕ್ಷಗಳ ಅನುದಾನದ ಬಗ್ಗೆ ಸಭೆಯಲ್ಲಿ ಸಲಹೆಗಳು ಬಂದಿರುತ್ತದೆ.

ವಾರ್ಡ್ ವ್ಯಾಪ್ತಿಯ ಹಲವಾರು ಕಡೆಗಳಲ್ಲಿ, ಸರಗಳ್ಳತನ ಮತ್ತಿತರ ಅನೈತಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣ ಸದರಿ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಮಾನ್ಯ ನೋಡಲ್ ಅಧಿಕಾರಿಗಳು ತಿಳಿಸಿದರು. ಹಾಗೂ ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ–88

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 88



Scanned by CamScanner